**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಸಿ.ಸಿ.2272/2022**

**ಫಿರ್ಯಾದಿ ಃ- ಕೊಪ್ಪ ಪೊಲೀಸ್ ಠಾಣೆ**

**- ವಿರುದ್ಧ -**

**ಆರೋಪಿ ಃ- 1 ಬಾಲರಾಜು ಬಿ.ಎ. ಬಿನ್ ಲೇಟ್ ಅನಿಲ್ ಕುಮಾರ**
**30 ವರ್ಷ, ವಾಸ ಃ ಬಸರಾಳು ಗ್ರಾಮ,**
**ಮಂಡ್ಯ ತಾಃ ಮತ್ತು ಜಿಲ್ಲೆ.**

**ಆಪಾದನೆ**

ದಿನಾಂಕಃ25.02.2022 ರಂದು ರಾತ್ರಿ ಸುಮಾರು 10.30 ರಿಂದ 11.00 ಗಂಟೆ ಸುಮಯದಲ್ಲಿ ಕೊಪ್ಪ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ ಅಬಲವಾಡಿ ಮಹದೇಶ್ವರ ದೇವಸ್ಥಾನಕ್ಕೆ ಹೋಗುವ ರವಿ ಬಿನ್ ರಾಮೇಗೌಡರವರ ಜಮೀನಿನ ನೇರದಲ್ಲಿ 1 ನೇ ಆರೋಪಿಯಾದ ನೀವು ಕೆಎ 03 ಇಕ್ಸ್ 9327 ಪಲ್ಸರ್ ಬೈಕ್ ನಲ್ಲಿ ಮೃತ ಶ್ರೀನಿವಾಸರವರನ್ನು ಬೈಕ್ ನ ಹಿಂಭಾಗ ಕೂರಿಸಿಕೊಂಡು ಕೊಪ್ಪ ಕಡೆಯಿಂದ ಬಸರಾಳು ಕಡೆಗೆ ಅತಿ ವೇಗವಾಗಿ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವುಂಟುಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿದ್ದು ಭಾ.ದಂ.ಸಂ.ಕಲಂಃ **279**ರಡಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎನ್ನುವುದಾಗಿದೆ.

ಎರಡನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿ ನಿಮ್ಮ ಬಾಬ್ತು ವಾಹನವನ್ನು ಅತಿ ವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸಡನ್ ಆಗಿ ಬ್ರೇಕ್ ಹಾಕಿದಾಗ ಬೈಕ್ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದ ಗದ್ದೆಯೊಳಗೆ ಬಿದ್ದು ಬೈಕ್ ನ ಹಿಂಭಾಗದಲ್ಲಿ ಕುಳಿತಿದ್ದ ಶ್ರೀನಿವಾಸರವರ ತಲೆ, ಹಣೆ, ಕೈಗಳಿಗೆ ಹಾಗೂ ಇತರ ಕಡೆಗಳಲ್ಲಿ ತೀವ್ರ ಸ್ವರೂಪದ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ಭಾ.ದಂ.ಸಂ.ಕಲಂಃ **304(ಎ)**ರಡಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎನ್ನುವುದಾಗಿದೆ.

ಪ್ರ-6) ಈ ಆಪಾದನೆಯ ಸಂಗತಿಗಳು ನಿಮಗೆ ತಿಳಿದಿದೆಯಾ?
ಉಃ ಆರೋಪಿ -1 ಃ

ಪ್ರ-7) ಈ ಆಪಾದನೆಯನ್ನು ಒಪ್ಪಿಕೊಳ್ಳಲಿಚ್ಛಿಸುವಿರಾ ಅಥವಾ ಪ್ರಕರಣದಲ್ಲಿ ವಿಚಾರಣೆಯಾಗಬಯಸುವಿರಾ?

ಉಃ ಆರೋಪಿ - 1 ಃ

(ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ದಿನಾಂಕ 12.03.2024 ರಂದು ಓದಿ ಹೇಳಿ ಅವರ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದೆ.)

**(ನಳಿನ ಎಸ್.ಸಿ.)**
1ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,ಮದ್ದೂರು.

ಆರೋಪಿ ಸಹಿ ಃ